ಮಧ್ಯಾಹ್ನದ ಹೊತ್ತಿಗೆ ಬತ್ತಳೆ' ಅಂದ. ಇನ್ನೇನು ಮಾತು ಮುಗೀತು ಅನ್ನೋ ಅಷ್ಟರಲ್ಲಿ, ಮಗ 'ಅಪ್ಪಾ' ಅಂದ. ದನಿಯಲ್ಲಿ ಸಣ್ಣ ಅಳುಕಿತ್ತು. 'ಏನು?' ಅಂದ ಗುರುಸ್ವಾಮಿಗೆ ತಕ್ಷಣ ಉತ್ತರ ಬರಲಿಲ್ಲ. 'ಏನೂ ಇಲ್ಲ. ಕಾರ್ಖಾನೇಲಿ ಸಣ್ಣಪುಟ್ಟ ಕಳ್ತನ ಆಗ್ತಾ ಇವೆ. ಸರಿಯಾಗಿ ನಿಗಾ ಮಾಡಕ್ಕೆ ಆಗ್ತಾ ಇಲ್ಲ'. ಮಗಾ ನಿಧಾನಕ್ಕೆ ವಿಷಯ ಮುಂದಿಟ್ಟ. ಇದೇನೋ ಹೊಸ ಸಂಗ್ತಿ ಐತಲ್ಲ ಅಂತ ಗುರುಸ್ವಾಮಿ, 'ಕಾವಲಿಗೇಂತಲೆ ಮುನಿಸ್ವಾಮಿ ಇದಾನಲ್ಲ. ಅದೆಂಗೆ ಕಳ್ತನ ಆಗ್ತವೆ? ಅವನೇನು ಹೇಳ್ತನೆ? ನನಿಗ್ಯಾಕೆ ಇದನ್ನು ಇಷ್ಟು ದಿನಾ ಹೇಳ್ಲಿಲ್ಲ?' ಅಂತೆಲ್ಲ ಪ್ರಶ್ನಿಸಿದ. 'ಏನಿಲ್ಲ. ಎದುರಿಗೇ ಇದ್ದಾಗ ಆಗೋಹಂಗೆ ಎದುರಿಗೆ ಇಲ್ದೇ ಇದ್ರೆ ಆಗಲ್ಲ. ಅದಕ್ಕೆ...' ಅಂತಾ ರಾಗ ಎಳ್ದ. 'ಹೂಂ ಅದಕ್ಕೆ?' ಅಂತಾ ಗುರುಸ್ವಾಮಿ ಪ್ರಶ್ನಿಸಿದ್ದಕ್ಕೆ, "ಹೆಂಗೂ ಕಾರ್ಖಾನೆಗೆ ಅಂತಾ ಒಂದು ರೂಮು ಕಟ್ಟಿಸಿದೀವಲ್ಲ. ಅದರ ಜೊತೆಗೆ ಇನ್ನೊಂದು ರೂಮು, ಅಡಿಗೆ ಮನೆ ಹಾಕ್ಸಿ. ನಾವಿಬ್ಬರೂ ಅಲ್ಲಿಗೇ ಹೋಗಣ ಅಂತಿದೀವಿ'. ಗುರುಸ್ವಾಮಿಗೆ ತಕ್ಷಣಕ್ಕೆ ಭೂಮಿಗೇ ಇಳಿದುಹೋದ ಹಾಗಾಯ್ತು. ಈ ಕುದಿ ಇವತ್ತಿನದಲ್ಲ ಅನ್ನಿಸಿತು. ಹೆಂಡತಿ ಕಡೆ ನೋಡುವ ಧೈರ್ಯ ಬರಲಿಲ್ಲ. ಏನೂ ಹೇಳದೆ ತೋಟದ ಕಡೆ ಹೊರಟ. ಮಧ್ಯಾಹ್ನದವರೆಗೆ ಚಡಪಡಿಸುತ್ತಲೇ ತೋಟಕ್ಕೆ ನೀರು ಕಟ್ಟಿ, ಹೊಟ್ಟೆ ಚುರ್ ಅಂದಾಗ ಮನೆ ಕಡೆ ಹೊರಟ.

ಮನಿಗೆ ಬಂದಾಗ ಹೆಂಡತಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಬೆಳಗಿನ ದುಃಖ ಇನ್ನೂ ಆರಿಲ್ಲ ಅನ್ನಿಸಿತು. ಒಂದು ಸಮಾಧಾನದ ಮಾತನ್ನಾದರೂ ಹೇಳೋಣ ಅನ್ನಿಸಿತು. 'ಸಾಕ್ ಬಿಡಮ್ಮಿ, ಅವರವರ ಸಂಸಾರ ಅವರಿಗೆ... ಈಗ ನಮ್ಮಿಂದ ಅವರಿಗೇನಾಗಬೇಕು?' ಅಂದ. ಹೆಂಡತಿ 'ಅಯ್ಯೋ, ನಿಮ್ಮಿ...' ಎಂದು ಬಿಕ್ಕಳಿಸಿದಳು. 'ಯಾಕೆ ಏನಾಯ್ತೆ, ನಿಮ್ಮಿ ಇನ್ನೂ ಕಾಲೇಜಿಂದ ಬಂದಿಲ್ವೆ?' ಎಂದ. 'ಇನ್ನೆಲ್ಲಿ ಬರ್ತಳೆ, ಯಾವನ್ ಜೊತೆಗೋ ಓಡೋಗವ್ಳೆ' ಹೆಂಡತಿಯ ಮಾತು ಕೇಳಿದ ಗುರುಸ್ವಾಮಿ ಕುಡಿಯುತ್ತಿದ್ದ ನೀರಿನ ತಂಬಿಗೆಯನ್ನು ಹಾಗೇ ಕುಕ್ಕಿದ. ಹೆಂಡತಿಯ ಅಳುವಿನ ನಡುನಡುವಿನ ಮಾತಿನಲ್ಲಿ ತಿಳಿದದ್ದು ಇಷ್ಟು: ಜೊತೆಯಲ್ಲಿ ಓದುತ್ತಿದ್ದ ಇನ್ನೊಂದು ಜಾತಿಯ ಹುಡುಗನ ಜೊತೆಗೆ ತಿಪಟೂರಿಗೆ ಹೋಗಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಮದುವೆ ಆಗಿದ್ದಾಳಂತೆ, ಹುಡುಗನ ಮನೆ ಕಡೇವ್ರದ್ದೇನೂ ತಕರಾರಿಲ್ಲವಂತೆ, ಅವನ ಮನೆಗೇ ಹೋಗವ್ಳಂತೆ, ಊರಿಗೆ ಸದ್ಯಕ್ಕೆ ಬರಲ್ಲ ಅಂತಾ ಹೇಳಿಕಳಿಸವ್ಳೆ. ಹಾಗೇ ಕಂಬಕ್ಕೆ ಒರಗಿ ಕುಂತವ್ನು ಬಹಳ ಹೊತ್ತು ಕೂತೇ ಇದ್ದ. ಹೆಂಡತಿ ಅಳುತ್ತಾ ಒಳಗೆ ಮಲಗಿದವಳು ಸ್ವಲ್ಪ ಹೊತ್ತಾದ ಮೇಲೆ ಬಂದು ನೋಡಿದರೆ ಅದ್ಯಾವಾಗಲೋ ಹೊರಟುಹೋಗಿದ್ದ. ಮನೆ ಬಿಟ್ಟು ಬಂದವನು ಸೀದಾ ಬಂದಿದ್ದು ಊರ ಹೊರಗಿನ ಅಜ್ಜಯ್ಯನ ಗದ್ದುಗೆಗೆ. ಅಲ್ಲಿ ಕಂಡ ಕನಸಿನೊಂದಿಗೆ ಬೆಳಿಗ್ಗೆ ಮನೆಗೆ ವಾಪಸ್ಸು ಬಂದಿದ್ದ.

ಬೆಳಿಗ್ಗೆ ಕೇಳಿದ್ದ ಭೈರಜ್ಜಿಯ ತತ್ವಪದ ಮತ್ತೆ ಮತ್ತೆ ಕಿವಿಯಲ್ಲಿ ಗುಃಯ್‌ಗುಡುತ್ತಲೇ ಇತ್ತು. ರಾತ್ರಿಯ ಕನಸಿನ ಭಾರ ಇನ್ನೂ ಇಳಿದಿರಲಿಲ್ಲ. ರಾತ್ರಿ ಎಷ್ಟು ಹೊತ್ತಾದರೂ ನಿದ್ದೆ ಹತ್ತಲಿಲ್ಲ. ಮಕ್ಕಳು ಹೀಗೆ ಮಾಡುತ್ತಿರುವುದ್ಯಾಕೆ? ಇದರಲ್ಲಿ ಅವರ ತಪ್ಪೇನಿದೆ? ನಾನಾದರೂ ಇವರಿಗೆ ಇನ್ನೇನು ಮಾಡಬೇಕಿತ್ತು? ಪ್ರೀತಿಯ ಮಗಳು ಹೀಗೆ ಮಾಡಿದಳಲ್ಲ? ಹಾಗಾದರೆ ಅವಳು ಇಷ್ಟ ಪಟ್ಟ ಹುಡುಗನ್ನ ಮದುವೆ ಆದದ್ದೆ ತಪ್ಪೆ? ಕೇಳಿದ್ದರೆ ನಾನು ಒಪ್ಪುತ್ತಿದ್ದೆನೆ? ಇನ್ನು ಗಂಡುಮಕ್ಕಳು? ಅವರವರ ಸ್ವಾತಂತ್ರ್ಯಕ್ಕೆ ನಾನೇಕೆ ಅಡ್ಡಬರಬೇಕು? ಯಾವುದೂ ಬಗೆಹರಿಯಲಿಲ್ಲ. ಅದ್ಯಾವಾಗಲೋ ನಿದ್ದೆ ಹತ್ತಿತ್ತು. ಎಚ್ಚರವಾದಾಗ ಬೆಳಕರಿದು ಬಹಳ ಹೊತ್ತಾಗಿತ್ತು. ಹೊರಗೆ ಅದ್ಯಾರ ಜೊತೆಗೋ ಹೆಂಡತಿ ಮಾತನಾಡುತ್ತಿದ್ದಳು. ಸ್ವಲ್ಪಹೊತ್ತು ಹಾಗೇ ಮಲಗಿಯೇ ಇದ್ದ.

ಯಾಕೋ ಏಳಲೂ ಮನಸ್ಸಿರಲಿಲ್ಲ. ಮಲಗಲು ಸಾಧ್ಯವಾಗದ್ದಕ್ಕೆ ಎದ್ದ. ಎದ್ದದ್ದನ್ನು ನೋಡಿ ಕಾಫಿ ತರಲು ಹೆಂಡತಿ ಒಳಗೆ ಹೋದ ಸದ್ದಾಯಿತು. ಎದ್ದು ಹೊರಗೆ ಬಂದಾಗ ಕಾಫಿ ಕಪ್ಪನ್ನು ಹಿಡಿದು ಬಂದ ಹೆಂಡತಿ, 'ಹುಚ್ಚೀರಜ್ಜ ಬಂದಿತ್ತು, ನಿನ್ನ ಕೇಳ್ತು' ಅಂದಳು. 'ಯಾವ ಹುಚ್ಚೀರಜ್ಜ?' ಅಂದ. 'ಹೊರಗೆ ಕುಂತೈತೆ. ನೋಡೋಗು' ಅಂದಳು. ಯಾರಿರಬಹುದು ಅಂತಾ ಹೊರಗೆ ಬಂದು ನೋಡಿದರೆ ಯಾರೂ ಇಲ್ಲ, ಖಾಲಿ ಜಗಲಿ! ಜಗಲಿಯ ಮೇಲೆ ಹುಚ್ಚೀರಜ್ಜ ಯಾವಾಗಲೂ ಹೊತ್ತು ಓಡಾಡುತ್ತಿದ್ದ ಅದೇ ಗೋಣಿಚೀಲ! ಕನಸ್ಸಿನಲ್ಲಿ ಹೆಗಲೇರಿದ್ದ ಅದೇ ಚೀಲ 'ತಗೋ ಹೊತ್ಕೋ...' ಅನ್ನುತ್ತಿತ್ತು.

●